# JAN DHAN SHIKSHA –I



*Lessons | Ideas | Resources*

# ವೀಡಿಯೋ ಗಿನ್ನಿ



ವೀಡಿಯೋ ತೋರಿಸಿರಿ

## ಎಮರ್ಜೆನ್ಸಿಗಳು

ಅನಾರೋಗ್ಯ, ಅಪಘಾತ, ಮರಣದಂತಹ
ಅನಿರೀಕ್ಷಿತ ಖರ್ಚುಗಳು



# ಉಳಿತಾಯ ಯಾಕೆ ಅವಶ್ಯ?



## ಭವಿಷ್ಯದ ಅವಶ್ಯಕತೆಗಳು

ಉಳಿತಾಯ ಮಾಡಿದರೆ ಇಂದು ಖರೀದಿಸಲಾಗದ್ದನ್ನು ಭವಿಷ್ಯದಲ್ಲಿ ಖರೀದಿಸಬಹುದು



## ದೊಡ್ಡ ಖರ್ಚುಗಳು

ಮನೆ ಖರೀದಿ, ಮದುವೆ, ಶಿಕ್ಷಣ ಮುಂತಾದ ದೊಡ್ಡ ಖರ್ಚುಗಳನ್ನು ನಿಭಾಯಿಸಲು

# ಮನೆಯಲ್ಲಿ ಹಣವನ್ನು ಇಟ್ಟುಕೊಳ್ಳುವುದರಿಂದ ತೊಂದರೆಗಳು



## ಅಸುರಕ್ಷಿತ

ಹಣವನ್ನು ಕದ್ದೊಯ್ಯಬಹುದು ಅಥವಾ ಅದು ನೈಸರ್ಗಿಕ ಅನಾಹುತಗಳಿಂದಾಗಿ ಕಳೆದು ಹೋಗಬಹುದು



## ಬೆಳವಣಿಗೆಯ ಅವಕಾಶದ ನಷ್ಟ

ಬಡ್ಡಿಯ ರೂಪದ ಆದಾಯ ನಷ್ಟವಾಗುತ್ತದೆ



## ಸಾಲದ ಅರ್ಹತೆಯಿಲ್ಲ

ಬ್ಯಾಂಕ್ ಠೇವಣಿಗಳು ಸಾಲದ ಅರ್ಹತೆಯನ್ನು ಸೃಷ್ಟಿಸುತ್ತವೆ

# ಬ್ಯಾಂಕು ಯಾಕೆ ಬೇಕು?

ಹಣ ಭದ್ರವಾಗಿರಲಿ

ಚಿಟ್ ಫಂಡ್,
ಸಾಹುಕಾರರಿಂದ ಹಣದ
ಭದ್ರತೆಗೆ ಬರುವ
ಅಪಾಯಗಳನ್ನು ತಪ್ಪಿಸಿರಿ

ಉಳಿತಾಯದ
ಅಭ್ಯಾಸವನ್ನು ರೂಢಿಸಿರಿ




ಸಾಲಗಳು

ಬಡ್ಡಿ ಗಳಿಸಿರಿ

ಚೆಕ್/ಡಿಮಾಂಡ್ ಡ್ರಾಫ್ಟ್ ಬಳಸಿ ಹಣ ಸಂದಾಯ
ಮಾಡಿರಿ

# ಖಾತೆ ತೆರೆಯಲು ಬೇಕಾದ ದಾಖಲೆ ಪತ್ರಗಳು

**‘ನಿಮ್ಮ ಗ್ರಾಹಕರನ್ನು ತಿಳಿಯಿರಿ’(ಕೆವೈಸಿ): ಫೋಟೋ ಗುರುತು ಪತ್ರ, ವಿಳಾಸ ರುಜುವಾತು, ಫೋಟೊ**

## ಅಧಿಕೃತವಾಗಿ ಸಿಂಧುವಾಗಿರುವ ದಾಖಲೆಗಳು (ಫೋಟೋ ಗುರುತು ಪತ್ರ/ವಿಳಾಸ ರುಜುವಾತು)





















## ಯಾವುದೇ ಅಧಿಕೃತ ದಾಖಲೆಗಳು ಇಲ್ಲದಿದ್ದ ಪಕ್ಷದಲ್ಲಿ

ಇತ್ತೀಚೆಗಿನ ಭಾವಚಿತ್ರವನ್ನು ನೀಡಿ ಬ್ಯಾಂಕ್ ಅಧಿಕಾರಿಯ ಉಪಸ್ಥಿತಿಯಲ್ಲಿ ರುಜು ಹಾಕಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಕೊಟ್ಟು ಕೆಲವು ನಿರ್ದಿಷ್ಟ ಷರತ್ತುಗಳೊಂದಿಗೆ ‘ಸಣ್ಣ ಖಾತೆ’ಯೊಂದನ್ನು ತೆರೆಯಬಹುದು.

**ಪ್ರಾಪ್ತ ವಯಸ್ಸಿಗೆ ಬಂದಾಗ– ಅಂದರೆ, ಅಪ್ರಾಪ್ತರ ಖಾತೆಗಳಿಗೆ ಸಂಬಂಧಿಸಿದಂತೆ 18 ವರ್ಷ ತುಂಬಿದಾಗ, ಹೊಸದಾಗಿ ಕೆವೈಸಿ ದಾಖಲೆಪತ್ರಗಳನ್ನು ಸಲ್ಲಿಸಬೇಕಾಗುತ್ತದೆ.**



# ಬ್ಯಾಂಕಿಂಗ್ ಉತ್ಪನ್ನಗಳು

## ಎಟಿಎಂ ಡೆಬಿಟ್ ಕಾರ್ಡ್
## ರುಪೇ ಡೆಬಿಟ್ ಕಾರ್ಡ್




ಅಟೋಮೇಟೆಡ್ ಟೆಲ್ಲರ್ ಮೆಷೀನ್/ಪೊಯಿಂಟ್ ಆಫ್ ಸೇಲ್(ಪಿಒಎಸ್)/ಮೈಕ್ರೋ ಎಟಿಎಂಗಳಿಂದ ಪಿನ್/ಪಾಸ್‌ವರ್ಡ್ ಮೂಲಕ ನಗದು ಹಣ ಹಿಂಪಡೆಯಲು, ಖರೀದಿಗಳೇ ಮುಂತಾದವುಗಳಿಗಾಗಿ ನಗದುರಹಿತ ಪಾವತಿಗಳಿಗಾಗಿ.

# ಬ್ಯಾಂಕಿಂಗ್ ಉತ್ಪನ್ನಗಳು



ಆವರ್ತಕ ಖಾತೆ

ಮಾಸಿಕ ಉಳಿತಾಯ ಬ್ಯಾಂಕ್ ಉಳಿತಾಯ ಖಾತೆಗಿಂತಲೂ ಹೆಚ್ಚು ಬಡ್ಡಿ ಪಾವತಿ



ಉಳಿತಾಯ ಖಾತೆ (ಮೂಲ ಬ್ಯಾಂಕ್ ಉಳಿತಾಯ ಖಾತೆ)

ಸಾಮಾನ್ಯ ವ್ಯವಹಾರ, ಠೇವಣಿ ಇರಿಸುವ ಮತ್ತು ಹಣ ಹಿಂಪಡೆಯುವ ವಿಚಾರದಲ್ಲಿ ನಮನೀಯತೆ ಪಾಸ್ ಪುಸ್ತಕ, ಚೆಕ್ ಪುಸ್ತಕ ಇತ್ಯಾದಿ



ನಿರಖು ಠೇವಣಿ

ಏಳು ದಿನಗಳಿಂದ ಹತ್ತು ವರ್ಷಗಳ ನಡುವಿನ ಅವಧಿಗೆ ನಿರಖು ಠೇವಣಿ–ಹೆಚ್ಚು ಬಡ್ಡಿ

# ಬ್ಯಾಂಕಿಂಗ್ ಉತ್ಪನ್ನಗಳು



## ಶಿಕ್ಷಣ ಸಾಲಗಳು

ಭಾರತದಲ್ಲಿ ಉನ್ನತ/ವೃತ್ತಿ ಶಿಕ್ಷಣ ಅಧ್ಯಯನಕ್ಕೆ ಗರಿಷ್ಠ ರೂ. ಹತ್ತು ಲಕ್ಷ ಮತ್ತು ವಿದೇಶದಲ್ಲಿ ಅಧ್ಯಯನಕ್ಕೆ ರೂ. 20 ಲಕ್ಷ ಅಥವಾ ಹೆಚ್ಚು



## ಓವರ್ ಡ್ರಾಫ್ಟ್ ಗಳು

ಖಾತೆಗಳಲ್ಲಿರುವ ಒಟ್ಟಾರೆ ಜಮಾ ಮೊತ್ತವನ್ನು ಅರ್ಹತೆಯ ಆಧಾರದಲ್ಲಿ ಮಂಜೂರಾದ ಮಿತಿಯವರೆಗೆ ಹಿಂಪಡೆಯಲು ಅವಕಾಶವಿದೆ

**ನಿಮಗೆ ಗೊತ್ತೇ?**

ವಿದ್ಯಾರ್ಥಿಗಳು ಶಿಕ್ಷಣ ಸಾಲ ಅರ್ಜಿಗಳು ಮತ್ತು ಟ್ರ್ಯಾಕಿಂಗ್ ಗಾಗಿ ಭಾರತ ಸರಕಾರದ ವಿದ್ಯಾಲಕ್ಷ್ಮೀ ಪೋರ್ಟಲ್ ನಲ್ಲಿ ಕೂಡ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು

VIDYA LAKSHMI
Fulfilling Educational Aspirations

**ನಿಜ ವಿಚಾರಗಳು:** ಮಾರವಾಡಿಗಳು ವಿಧಿಸುವ ಬಡ್ಡಿದರಗಳಿಗೆ ಹೋಲಿಸಿದರೆ ಬ್ಯಾಂಕ್ ಸಾಲಗಳ ಬಡ್ಡಿದರಗಳು ತುಂಬ ಕಡಿಮೆ. ಆದ್ದರಿಂದ ಮಾರವಾಡಿಯೊಬ್ಬ ಶೇಕಡಾ 3ರ ಬಡ್ಡಿ ದರ ವಿಧಿಸಿದರೆ ಅದು ವಾರ್ಷಿಕ ಶೇಕಡಾ 36 ಎಂದರ್ಥ. ಆದರೆ ಬ್ಯಾಂಕೊಂದು ಶೇಕಡಾ 12ರ ಬಡ್ಡಿ ದರ ವಿಧಿಸಿದರೆ ಅದು ವಾರ್ಷಿಕ ಶೇಕಡಾ 12 ಎಂದರ್ಥ.

# ಬ್ಯಾಂಕಿಂಗ್ ಸಲಕರಣೆಗಳು




ಚೆಕ್




ಡಿಮಾಂಡ್ ಡ್ರಾಫ್ಟ್

| ವೃತ್ತದೊಳಗಿನ ಸಂಖ್ಯೆ | ವಿವರ | ಈ ಮೇಲಿನ ಚೆಕ್ ನಲ್ಲಿ ಬರೆದದ್ದು |
|---|---|---|
| 01 | ಪಾವತಿಸಿ(ಯಾರಿಗೆ ಪಾವತಿಸಬೇಕೋ ಅವರ ಹೆಸರು) | ರಮೇಶ್ ಕೆ.ಎನ್. |
| 02 | ದಿನಾಂಕ(ಪಾವತಿ ದಿನಾಂಕ) | 31.03.1999 |
| 03 | ರೂಪಾಯಿಗಳು(ಪಾವತಿಸುವ ಹಣ-ಅಕ್ಷರಗಳಲ್ಲಿ) | ರೂಪಾಯಿ ಒಂದು ಸಾವಿರ ಮಾತ್ರ |
| 04 | ರೂಪಾಯಿಗಳು(ಪಾವತಿಸುವ ಹಣ-ಅಂಕೆಗಳಲ್ಲಿ) | 1,000 |
| 05 | ಚೆಕ್ ನೀಡುವವರ ಸಹಿ | ಸಹಿ (ಬ್ಯಾಂಕಿನವರು ನೀಡಿದ ಮಾದರಿ ಸಹಿಯ ಕಾರ್ಡ್‌ನಲ್ಲಿರುವಂತೆ ಇರಬೇಕು.) |
| 06 | ಪಾವತಿಸುವ ವಿಧಾನ | ಖಾತೆದಾರರಿಗೆ ಮಾತ್ರ |
| 07 | ಬ್ಯಾಂಕ್ ಶಾಖೆ ವಿಳಾಸ | ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಬ್ರಾಂಚ್, ಬೆಂಗಳೂರು-560001 |
| 08 | ಚೆಕ್ ನಂಬ್ರ | 665078 |

# ಭಾರತೀಯ ಕರೆನ್ಸಿ




ಒಂದು ರೂ. ನಾಣ್ಯ




ಒಂದು ರೂ. ನೋಟು




ಹತ್ತು ರೂಪಾಯಿ ನೋಟು

## ನಿಮಗೆ ಗೊತ್ತೇ?

ಹತ್ತು ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ನೋಟುಗಳಿಗೆ ರಿಸರ್ವ್ ಬ್ಯಾಂಕ್ ಗವರ್ನರರು ಸಹಿ ಹಾಕುತ್ತಾರೆ. ಒಂದು ರೂಪಾಯಿ ಮೊತ್ತದ ನೋಟುಗಳಿಗೆ ಅರ್ಥ ಸಚಿವಾಲಯದ ಕಾರ್ಯದರ್ಶಿಯವರು ಸಹಿ ಮಾಡುತ್ತಾರೆ. ನಾಣ್ಯಗಳನ್ನು ಭಾರತ ಸರಕಾರದ ಟಂಕಸಾಲೆಯು ಹೊರತರುತ್ತದೆ.

# ಬ್ಯಾಂಕಿಂಗ್ ಸೇವೆ ವಿತರಣಾ ಚಾನೆಲ್‌ಗಳು-1




## ಎಟಿಎಂ

ಎಟಿಎಂ/ರುಪೇ ಡೆಬಿಟ್ ಕಾರ್ಡ್ ಮೂಲಕ ನಗದು ಹಿಂದೆಗೆದುಕೊಳ್ಳುವುದು



## ಮೈಕ್ರೋ ಎಟಿಎಂ ಸಹಿತ ಬ್ಯಾಂಕ್ ಮಿತ್ರ

ಖಾತೆ ತೆರೆಯುವುದು, ಹಣ ಹಿಂಪಡೆಯುವುದು/ ಠೇವಣಿ, ಹಣ ವರ್ಗಾವಣೆ, ವಿಮೆ






## ಶಾಖೆ

ಎಲ್ಲ ಬ್ಯಾಂಕಿಂಗ್ ಸೇವೆಗಳು



## ಪೊಯಿಂಟ್ ಆಫ್ ಸೇಲ್(ಪಿಒಎಸ್)

ಖರೀದಿಸುವುದು ಮತ್ತು ಮಿತಿಯೊಳಗಿನ ನಗದು ಹಿಂಪಡೆಯುವುದು

# ವೀಡಿಯೋ–ಎಟಿಎಂ



ವೀಡಿಯೋ ತೋರಿಸಿರಿ

# ಬ್ಯಾಂಕಿಂಗ್ ಸೇವೆ ವಿತರಣಾ ಚಾನೆಲ್‌ಗಳು–2

## ಇಂಟರ್‌ನೆಟ್ ಬ್ಯಾಂಕಿಂಗ್

ಫಂಡ್ ವರ್ಗಾವಣೆ, ಬಿಲ್
ಪಾವತಿ, ಆನ್‌ಲೈನ್
ಶಾಪಿಂಗ್, ಟಿಕೆಟ್ ಬುಕ್ಕಿಂಗ್




## ಮೊಬೈಲ್ ಬ್ಯಾಂಕಿಂಗ್

ಫಂಡ್ ವರ್ಗಾವಣೆ, ಐಎಂಪಿಎಸ್ ಬಿಲ್
ಪಾವತಿ



## ನ್ಯಾಶನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್(ಎನ್‌ಇಎಫ್‌ಟಿ)

ಯಾವುದೇ ಮೊತ್ತವನ್ನು
ಬ್ಯಾಂಕುಗಳ ನಡುವೆ
ಪರಸ್ಪರ ವರ್ಗಾಯಿಸುವುದು




## ರಿಯಲ್ ಟೈಮ್ ಗ್ರೋಸ್ ಸೆಟ್ಲ್‌ಮೆಂಟ್(ಆರ್‌ಟಿಜಿಎಸ್)

ರೂ. 2 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತವನ್ನು
ಬ್ಯಾಂಕುಗಳ ನಡುವೆ ಪರಸ್ಪರ ವರ್ಗಾಯಿಸುವುದು

## ಮೊಬೈಲ್ ವಾಲೆಟ್‌ಗಳು

ಮೊಬೈಲ್ ಆಧಾರಿತ ನೈಜ
ವಾಲೆಟ್‌ಗಳು
ಆನ್‌ಲೈನ್ ಮತ್ತು ಆಫ್‌ಲೈನ್
ಖರ್ಚಿಗಾಗಿ ಖಾತೆಯಲ್ಲಿ
ನಿರ್ದಿಷ್ಟ ಮೊತ್ತವನ್ನು ಮುಂಚಿತವಾಗಿ
ತುಂಬಿಸುವುದು



# ಪ್ರಧಾನ ಮಂತ್ರಿ ಜನ್ ಧನ್ ಯೋಜನೆ

- 2014ರ ಅಗೋಸ್ತು 28ರಂದು ಮಾನ್ಯ ಪ್ರಧಾನ ಮಂತ್ರಿಯವರು ಚಾಲನೆ ನೀಡಿದರು.
- ಗ್ರಾಮೀಣ ಮತ್ತು ನಗರ ಪ್ರದೇಶಗಳ ಕುಟುಂಬಗಳನ್ನು ಒಳಗೊಳ್ಳುವುದರತ್ತ ಈ ಯೋಜನೆ ಗಮನ ನೀಡುತ್ತದೆ
- ರುಪೇ ಡೆಬಿಟ್ ಕಾರ್ಡ್ ರೂ. ಒಂದು ಲಕ್ಷದ ಅಂತರ್ಗತ ಅಪಘಾತ ವಿಮೆಯನ್ನು ಒದಗಿಸುತ್ತದೆ.
- ರೂ. 5,000 ದವರೆಗೆ ಓವರ್ ಡ್ರಾಫ್ಟ್ ಸೌಲಭ್ಯವಿದೆ.

# ಪ್ರಧಾನಮಂತ್ರಿ ಮುದ್ರಾ ಯೋಜನೆ (ಪಿಎಂಎಂವೈ)

- ಗೌರವಾನ್ವಿತ ಪ್ರಧಾನ ಮಂತ್ರಿಯವರು 'ಪ್ರಧಾನ ಮಂತ್ರಿ ಮುದ್ರಾ ಯೋಜನೆ' (ಪಿಎಂಎಂವೈ)ಗೆ 'ಸ್ಮಾಲ್ ಇಂಡಸ್ಟ್ರೀಸ್ ಡೆವೆಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ'(ಎಸ್‌ಐಡಿಬಿಐ)ದ ಅಧೀನ ವ್ಯವಸ್ಥೆಯ ನೆಲೆಯಲ್ಲಿ 08.04.2015ರಂದು ಚಾಲನೆ ನೀಡಿದರು.

- ಕಾರ್ಪೊರೇಟೇತರ ಸಣ್ಣ ಉದ್ಯಮ ಕ್ಷೇತ್ರ(ಎನ್‌ಸಿಎಸ್‌ಬಿಎಸ್)ಕ್ಕೆ ಹಣಕಾಸು ಸೌಲಭ್ಯಗಳ ಕುರಿತಂತೆ ಅಧಿಕೃತ ಅವಕಾಶಗಳನ್ನು ಒದಗಿಸುವುದು.

- ಆರ್ಥಿಕತೆಯ ನಿಧಿಯುಕ್ತವಲ್ಲದ ವಿಭಾಗಗಳಾದ ಸಣ್ಣ ಉತ್ಪಾದನಾ ಘಟಕಗಳು, ಅಂಗಡಿ ಮಾಲೀಕರು, ಹಣ್ಣು ಹಂಪಲು/ತರಕಾರಿ ಮಾರಾಟಗಾರರು, ಟ್ರಕ್ ಮತ್ತು ಟ್ಯಾಕ್ಸಿಗಳ ಆಪರೇಟರುಗಳು, ಆಹಾರ ಸೇವಾ ಘಟಕಗಳು, ದುರಸ್ತಿ ಅಂಗಡಿಗಳು, ಗುಡಿ ಕೈಗಾರಿಕೆಗಳು, ಕುಶಲಕರ್ಮಿಯ ಆಹಾರ ಸಂಸ್ಕರಣಾ ಘಟಕಗಳು, ಬೀದಿ ವ್ಯಾಪಾರಿಗಳು ಹಾಗೂ ಅಂತಹ ಇತರ ಅನೇಕ ವಿಭಾಗಗಳಿಗೆ ಬ್ಯಾಂಕ್ ಹಣಕಾಸು ನೆರವಿನ ಭರವಸೆಯನ್ನು ನೀಡುವುದು.

## ಮುದ್ರಾ ವಿಷನ್:

‘ಪಿರಮಿಡ್ ವಿಶ್ವ’ದ ತಳಮಟ್ಟದಲ್ಲಿರುವವರ ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗಾಗಿ ಅತ್ಯುತ್ತಮ ಪ್ರಾಪಂಚಿಕ ವಿಧಿ ವಿಧಾನಗಳು ಮತ್ತು ಗುಣಮಟ್ಟಗಳಿಂದ ಗುರುತಿಸಲ್ಪಟ್ಟ ಶ್ರೇಷ್ಠ ಸರ್ವಾಂಗೀಣ ಆರ್ಥಿಕ ಹಾಗೂ ಪೋಷಕ ಸೇವೆಗಳ ನೀಡಿಕೆದಾರನಾಗುವುದು.

## ಮುದ್ರಾ ಮಿಷನ್:

ಆರ್ಥಿಕ ಯಶಸ್ಸು ಮತ್ತು ಹಣಕಾಸಿನ ಭದ್ರತೆಯನ್ನು ಸಾಧಿಸಲು ನಮ್ಮ ಪಾಲುದಾರ ಸಂಸ್ಥೆಗಳೊಂದಿಗೆ ಸೇರಿಕೊಂಡು ಸಮ್ಮಿಳಿತ, ಸದೃಢ ಮತ್ತು ಮೌಲ್ಯಾಧಾರಿತ ಔದ್ಯಮಿಕ ಸಂಸ್ಕೃತಿಯೊಂದನ್ನು ಹುಟ್ಟು ಹಾಕುವುದು.

## ಮುದ್ರಾ ಉದ್ದೇಶ:

ಪಾಲುದಾರ ಸಂಸ್ಥೆಗಳನ್ನು ಬೆಂಬಲಿಸಿ ಉತ್ತೇಜಿಸುವುದರೊಂದಿಗೆ ಅತಿ ಸಣ್ಣ ಉದ್ಯಮಗಳ ಕ್ಷೇತ್ರಕ್ಕಾಗಿರುವ ಬೆಳವಣಿಗೆಯ ಜೀವ ಪರಿಸರ ವ್ಯವಸ್ಥೆಯೊಂದನ್ನು ಸೃಷ್ಟಿಸುವುದರ ಮೂಲಕ ಸಮ್ಮಿಳಿತ ಹಾಗೂ ಸದೃಢವಾದ ವಿಧಾನವೊಂದರಲ್ಲಿ ಪ್ರಗತಿಯನ್ನು ಸಾಧಿಸುವುದು ನಮ್ಮ ಮೂಲಭೂತ ಉದ್ದೇಶ.

# ಸಾಲದ ಪ್ರವರ್ಗಗಳು

| ಶಿಶು | ಕಿಶೋರ್ | ತರುಣ್ |
|---|---|---|
| ರೂ. 50,000ದವರೆಗೆ ಸಾಲ | ರೂ. 50,000ದಿಂದ 5 ಲಕ್ಷದವರೆಗೆ ಸಾಲ | ರೂ. 5 ಲಕ್ಷದಿಂದ ಹತ್ತು ಲಕ್ಷದವರೆಗೆ ಸಾಲ |

ಪಾರ್ಶ್ವಿಕ ಭದ್ರತೆಯಿಂದ ಮುಕ್ತವಾಗಿದೆ

ಶಿಶು ಸಾಲಕ್ಕೆ ಪರಿಶೀಲನಾ ಶುಲ್ಕ ಮತ್ತು 'ಮಾರ್ಜಿನ್' ಹಣವಿರುವುದಿಲ್ಲ







ಉತ್ಪಾದನೆ, ಸಂಸ್ಕರಣೆ, ವ್ಯಾಪಾರ, ಅಥವಾ ಸೇವಾ ಕ್ಷೇತ್ರದಂತಹ ಕೃಷಿಯೇತರ ಕ್ಷೇತ್ರದ ಆದಾಯ ತರುವ ಚಟುವಟಿಕೆಯಿಂದ ಕೂಡಿದ ಔದ್ಯಮಿಕ ಯೋಜನೆ ಹೊಂದಿರುವ ಯಾವುದೇ ಭಾರತೀಯ ಪ್ರಜೆ

ಮತ್ತು

ಯಾರಿಗೆ 10 ಲಕ್ಷಕ್ಕಿಂತ ಕಡಿಮೆ ಸಾಲದ ಅವಶ್ಯಕತೆಯಿದೆಯೋ ಅಂತಹ ಯಾವುದೇ ವ್ಯಕ್ತಿ

ಮುದ್ರಾ ಕಾರ್ಡ್ ರುಪೇ ಡೆಬಿಟ್ ಕಾರ್ಡ್ ಆಗಿದ್ದು ಅದು ದುಡಿಯುವ ಬಂಡವಾಳ

ವ್ಯವಸ್ಥೆಯ ಸೌಲಭ್ಯವನ್ನು ಓವರ್ ಡ್ರಾಫ್ಟ್ ರೂಪದಲ್ಲಿ ಒದಗಿಸುತ್ತದೆ ಹಾಗೂ ಅದನ್ನು

ಎಟಿಎಂ, ಬ್ಯಾಂಕ್ ಮಿತ್ರ ಮತ್ತು ಪಿಒಎಸ್‌ಗಳಲ್ಲಿ ಬಳಸಬಹುದಾಗಿದೆ.

# ಪಿಎಂಎಂವೈ ಯನ್ನು ಪಡೆಯುವುದು ಹೇಗೆ?




**ಹೆಚ್ಚಿನ ವಿವರಗಳಿಗಾಗಿ ಸಮೀಪದ ಯಾವುದೇ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ ಅಥವಾ ತಿತಿತಿ.ಟಣಜಡಿಚಿ.ಠಡಿರ.ಟಟ ಗೆ ಲಾಗ್ ಇನ್ ಆಗಿರಿ.**

ವೀಡಿಯೋ ತೋರಿಸಿರಿ (ಭೋಲಾ–ಹರಿಯಾ)

ವೀಡಿಯೋ ಮೇಲೆ ಚರ್ಚೆ

ಓವರ್ ಡ್ರಾಫ್ಟ್, ಮೈಕ್ರೋ ಎಟಿಎಂ ಮೇಲೆ ಚರ್ಚೆ

# ಮರುದಿನದ ಚಟುವಟಿಕೆಗಳಿಗೆ ಪಾತ್ರಗಳನ್ನು ವಹಿಸಿ ಕೊಡಿರಿ

**ಚಟುವಟಿಕೆ:**

ಎಲ್ಲ ಪಾತ್ರಗಳನ್ನು ಅರ್ಥ ಮಾಡಿಕೊಳ್ಳಲು ದಯವಿಟ್ಟು ನಿಮ್ಮ ಬ್ಯಾಂಕ್ ಮ್ಯಾನೇಜರ್ ರವರ ಜೊತೆಯಲ್ಲಿ ಕೆಲಸ ಮಾಡಿರಿ. ಹಾಗೇನೇ ನೀವು ಚರ್ಚಿಸಿದ ವಿಷಯಗಳನ್ನಾಧರಿಸಿದ ಸಣ್ಣ 'ರೂಪಕ'ವೊಂದನ್ನು ಈ ಕೆಳಗಿನ ಪಾತ್ರಗಳನ್ನು ಬಳಸಿಕೊಂಡು ಸಿದ್ಧಪಡಿಸಿರಿ.

## ಸ್ಯಾಂಪಲ್ ಪಾತ್ರಗಳು:



ಬ್ಯಾಂಕ್ ಮ್ಯಾನೇಜರ್



ಗ್ರಾಹಕ



ಮುಂಚೂಣಿ ಅಧಿಕಾರಿ




ಕ್ಯಾಷಿಯರ್



ಬ್ಯಾಂಕ್ ಮಿತ್ರ

**ಸ್ಯಾಂಪಲ್ ರೂಪಕ:** ಎರಡು–ಮೂರು ಮಂದಿ ವಿದ್ಯಾರ್ಥಿಗಳ ಗುಂಪೊಂದು ಬ್ಯಾಂಕ್ ಖಾತೆಯೊಂದನ್ನು ತೆರೆಯುವ ಪ್ರಾಮುಖ್ಯದ ಬಗ್ಗೆ ಚರ್ಚಿಸಬಹುದು ಹಾಗೂ ಅನಂತರ ಅವರು ಖಾತೆ ತೆರೆಯಲು ಶಾಖೆಯೊಂದಕ್ಕೆ ತೆರಳಬಹುದು. ಒಬ್ಬ ವಿದ್ಯಾರ್ಥಿ ತನ್ನ ಖಾತೆಗೆ ಜಮೆಯಾಗಿರುವ ವಿದ್ಯಾರ್ಥಿ ವೇತನದ ಹಣವನ್ನು ಹಿಂಪಡೆಯಲು ಕ್ಯಾಷಿಯರ್ ನ ಬಳಿಗೆ ಬಂದು ಅವನಲ್ಲಿ ಲಭ್ಯವಿರುವ ಹಣ ಹಿಂಪಡೆಯುವ ಸ್ಲಿಪ್ ನ್ನು ಭರ್ತಿ ಮಾಡಿ ಕೊಡಬಹುದು. ಹಾಗೇನೇ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವಶ್ಯವಿರುವ ಶಿಕ್ಷಣ ಸಾಲದ ಬಗ್ಗೆ ವಿಚಾರಿಸಬಹುದು.

ವಿದ್ಯಾರ್ಥಿಗಳಿಗೆ ಪಾತ್ರಗಳನ್ನು ಹಂಚಿರಿ–>ಅವರೊಂದಿಗೆ ಸ್ಕ್ರಿಪ್ಟ್ ನ್ನು ತಯಾರಿಸಿರಿ–ಮುಂದಿನ ಅವಧಿಯಲ್ಲಿ ಹತ್ತರಿಂದ ಹದಿನೈದು ನಿಮಿಷದ ರೂಪಕವೊಂದನ್ನು ಅಭಿನಯಿಸಿ ತೋರಿಸಿರಿ.

ಮೊದಲ ದಿನದ ಮುಕ್ತಾಯ

# ಎರಡನೆಯ ದಿನದ ಆರಂಭ

# ವಿಮೆ

## ಭವಿಷ್ಯದ ನಷ್ಟದ ವಿರುದ್ಧ ರಕ್ಷಣೆ

ವಿಮೆಗೊಳಗಾದ ವ್ಯಕ್ತಿಯು ಗಾಯಗೊಂಡರೆ ಅಥವಾ ಸತ್ತರೆ ವಿಮೆಯ ಮೊತ್ತದಷ್ಟು ಹಣವನ್ನು ಪಾವತಿಸುವ ಅಥವಾ ಯಾವುದಾದರೂ (ಮನೆ ಅಥವಾ ಕಾರಿನಂತಹ) ವಸ್ತು ಹಾನಿಗೊಳಗಾದರೆ, ನಷ್ಟಗೊಂಡರೆ ಅಥವಾ ಕಳ್ಳತನವಾದರೆ ಆ ವಸ್ತುವಿನ ಮೌಲ್ಯಕ್ಕೆ ಸಮಾನವಾದ ಹಣವನ್ನು ಪಾವತಿಸುವ ಆಶ್ವಾಸನೆ ನೀಡುವ ವಿಮಾ ಕಂಪೆನಿಗೆ ಪ್ರೀಮಿಯಂ ಕಂತುಗಳನ್ನು ನಿಯತವಾಗಿ ಪಾವತಿಸಿದರೆ ಈ ರಕ್ಷಣೆ ಸಿಗುತ್ತದೆ.




**ಜೀವ ವಿಮೆ**



**ಜಡ–ವಸ್ತುಗಳ ವಿಮೆ**



# ಸಾಮಾಜಿಕ ಭದ್ರತಾ ಯೋಜನೆಗಳು

**Pradhan Mantri Suraksha Bima Yojana**

ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ

ಸದಸ್ಯನೊಬ್ಬ(18ರಿಂದ 70 ವರ್ಷ) ವಾರ್ಷಿಕ ರೂ. 12ರ ಕಂತನ್ನು ಪಾವತಿಸಿದರೆ ರೂ. 2 ಲಕ್ಷದಷ್ಟು ಅಪಘಾತ ವಿಮೆ ಸೌಲಭ್ಯ ದೊರೆಯುತ್ತದೆ

**Pradhan Mantri Jeevan Jyoti Bima Yojana**

ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ

ಸದಸ್ಯನೊಬ್ಬ (18ರಿಂದ 50ವರ್ಷ) ವಾರ್ಷಿಕ ರೂ. 330ರ ಕಂತನ್ನು ಪಾವತಿಸಿದರೆ ರೂ. 2 ಲಕ್ಷದಷ್ಟು ಜೀವ ವಿಮಾ ಸೌಲಭ್ಯ ದೊರೆಯುತ್ತದೆ

**Atal Pension Yojana**

ಅಟಲ್ ಪಿಂಚಣಿ ಯೋಜನೆ

ರೂ 1,000 ದಿಂದ ರೂ 5,000 ದವರೆಗಿನ ಖಚಿತ ಪಿಂಚಣಿ (18ರಿಂದ 40 ವರ್ಷ)

# ಪಿಂಚಣಿ ಮತ್ತು ಪಬ್ಲಿಕ್ ಪ್ರಾವಿಡೆಂಟ್ ಫಂಡ್(ಪಿಪಿಎಫ್)

## ಪಿಂಚಣಿ

ನಿವೃತ್ತಿಯ ಅನಂತರ ಖರ್ಚು ಮಾಡಲು ಹಣವನ್ನು ಮೀಸಲಿರಿಸುವ ಒಂದು ಯೋಜನೆ





## ಪಿಪಿಎಫ್

ಪಬ್ಲಿಕ್ ಪ್ರಾವಿಡೆಂಟ್ ಫಂಡ್ ಉಳಿತಾಯದೊಂದಿಗೆ ತೆರಿಗೆ ಪಾವತಿಯಿಂದ ರಕ್ಷಣೆ ನೀಡುವ ಯೋಜನೆಯಾಗಿದೆ.

ಅದು ಆದಾಯ ತೆರಿಗೆ ಲಾಭಗಳೊಂದಿಗೆ ಮಿಳಿತಗೊಂಡ

ಯುಕ್ತ ಹುಟ್ಟುವಳಿಯನ್ನು ತಂದು ಕೊಡುವ ಹೂಡಿಕೆಯ ಅವಕಾಶವನ್ನು

ನೀಡುವುದರ ಮೂಲಕ ಸಣ್ಣ ಉಳಿತಾಯವನ್ನು ಚುರುಕುಗೊಳಿಸುತ್ತದೆ.

**ತತ್‌ಕ್ಷಣದ ವಿಚಾರಣೆ:**

☑ ನಿಮ್ಮ ಹೆತ್ತವರು ಮತ್ತು ಅಜ್ಜ ಅಜ್ಜಿಯವರನ್ನು, ಅವರು ಪಿಂಚಣಿ ಯೋಜನೆಯನ್ನು ಹೊಂದಿರುವ ಬಗ್ಗೆ ವಿಚಾರಿಸಿರಿ.

# ವೀಡಿಯೋ–ಪಿಎಂಜೆಡಿವೈ(ಇನ್‌ಫ್ಲೂಯೆನ್ಸರ್)



ವೀಡಿಯೋ ತೋರಿಸಿರಿ

# ವೀಡಿಯೋ–ಸುರಕ್ಷಾ ಬಿಮಾ ಯೋಜನೆ(ಜೀನಸು)



ವೀಡಿಯೋ ತೋರಿಸಿರಿ

# ವೀಡಿಯೋ–ಸುರಕ್ಷಾ ಬಿಮಾ ಯೋಜನೆ(ಆಟೋ ರಿಕ್ಷಾ)




ವೀಡಿಯೋ ತೋರಿಸಿರಿ

# ವೀಡಿಯೋ–ಅಟಲ್ ಪಿಂಚಣಿ ಯೋಜನೆ(ಎಪಿವೈ)



ವೀಡಿಯೋ ತೋರಿಸಿರಿ

# ವೀಡಿಯೋ–ಜೀವನ್ ಜ್ಯೋತಿ




ವೀಡಿಯೋ ತೋರಿಸಿರಿ

ಗುಂಪು ಚಟುವಟಿಕೆ

ರಸ ಪ್ರಶ್ನೆ

ಬಹುಮಾನ